ಇರಲಿಲ್ಲ. ಹಾಗೆ ಹಾಕುವ ಮುನ್ನ ಆಕೆ ತುಂಬಾ ಆತಂಕದಲ್ಲಿದ್ದಳು. ತನ್ನ ಅನೇಕ ಸ್ನೇಹಿತೆಯರಿಗೆ ಫೋನ್ ಮಾಡಿ ಕೇಳಿದ್ದಳು, 'ನಮ್ಮ ಅಜ್ರಾ ತುಂಬಾ ಒಳ್ಳೆಯ ಹುಡುಗಿ 'ಎಂದು ಅವಳ ಬಗ್ಗೆ ವಿವರಗಳನ್ನು ಸವಿಸ್ತಾರವಾಗಿ ತಿಳಿಸಿ, ಸ್ವಲ್ಪ ಲೈಟಾಗಿ ಗುಣಗಾನವನ್ನೂ ಮಾಡಿ ಕೊನೆಗೆ 'ಅವಳಿಗೊಂದು ಗಂಡು ಹುಡುಕಿ ಕೊಡಿ' ಎಂದು ಹೇಳುವಾಗ ಅವಳ ಧ್ವನಿಯೇ ಕುಗ್ಗಿಹೋಗುತ್ತಿತ್ತು. ನಿಜ ಹೇಳಬೇಕೆಂದರೆ ಗಂಡಿನ ಮನೆಯವರೇ ಹುಡುಕಿಕೊಂಡು ಬಂದು ನಿಮ್ಮ ಹೆಣ್ಣನ್ನು ಮದುವೆ ಮಾಡಿಕೊಡಿ ಎಂದು ಕೇಳಬೇಕಿತ್ತು; ಅದು ಸರಿಯಾದ ಕ್ರಮ. ಆದರೆ, ಇದು ಯಾವ ಕಾಲ ಬಂತಪ್ಪಾ.

ಇನ್ನೂ ದುರದೃಷ್ಟಕರ ವಿಷಯವೆಂದರೆ, ಅಜ್ರಾ ಅವಳ ಸಂಭಾಷಣೆಯನ್ನು ಅವಳಂತೆಯೇ ಅನುಕರಿಸಲು ಆರಂಭ ಮಾಡಿದಳು. ಥೇಟ್ ರೆಹಮತ್‌ಳಂತೆಯೇ ಏರಿಳಿತದೊಂದಿಗೆ ಮಾತನಾಡುತ್ತಾ ಕೊನೆ ಕೊನೆಯಲ್ಲಿ ಯಾಚನೆಯ ಧ್ವನಿಯೊಂದಿಗೆ ಮಾತನ್ನು ಮುಗಿಸುತ್ತಿದ್ದಳು. ಊಟಕ್ಕೆ ಕುಳಿತಾಗ ಅವಳು ನಡೆಸುತ್ತಿದ್ದ ಪ್ರಹಸನವನ್ನು ಕಂಡು ಅವಳ ಅಪ್ಪ ಮತ್ತು ಅಣ್ಣ ಇಬ್ಬರೂ ಬಿದ್ದು ಬಿದ್ದೂ ನಗುತ್ತಿದ್ದರು. ತನ್ನ ಕುಟುಂಬದ ಈ ಪರಿಯ ಪ್ರತಿಕ್ರಿಯೆಯನ್ನು ಕಂಡು ಮೊದಮೊದಲು ರೆಹಮತ್ ತುಂಬಾ ಕೋಪಗೊಳ್ಳುತ್ತಿದ್ದಳು. ನಂತರ ಅವಳ ಪ್ರತಿಭಟನೆಯು ಅಳುವಿನ ಮೂಲಕ ಪ್ರಕಟಗೊಂಡ ನಂತರ ಅವಳ ಗಂಡ ಶರೀಫ್ ನಗುವನ್ನು ನಿಲ್ಲಿಸಿದ. ಮಗ ನಯಾಜ್ ವಿಷಯ ವಿಪರೀತಕ್ಕೆ ಹೋಯಿತು ಎಂದು ಮನಗೊಂಡು ಕೂಡಲೇ ತಾಯಿಯ ಪರ ಪಕ್ಷಾಂತರ ಮಾಡಿದ ಹಾಗೂ ಇದೀಗ ತಾನೇ ಅಜ್ರಾ ಮದುವೆಯ ವಯಸ್ಸಿಗೆ ಬಂದಿದ್ದಾಳೆ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡ. ಅವಳ ಮದುವೆಗೆ ತಾನು ಇನ್ನಿಲ್ಲದ ಪ್ರಯತ್ನವನ್ನು ಮಾಡುವುದಾಗಿ ತಾಯಿಗೆ ವಾಗ್ದಾನ ಕೂಡ ಮಾಡಿದ. ಅವನು ಒಂದೆರಡು ದಿನಗಳಲ್ಲಿಯೇ ಇಂಟರ್‌ನೆಟ್‌ನಲ್ಲಿ ಆಕೆಯ ವಿವರಗಳನ್ನು ಮತ್ತು ಫೋಟೊವನ್ನು ಹಾಕುವುದಾಗಿ ತಿಳಿಸಿದ.

ಈಗ ಹೌಹಾರುವ ಸರದಿ ಮಾತ್ರ ರೆಹಮತ್‌ಳದ್ದು. ಎಲ್ಲಾದರೂ ಉಂಟೇ? ಪ್ರಾಯಕ್ಕೆ ಬಂದಿರುವ ಮಗಳ ಫೋಟೊವನ್ನು ಯಾರಾದರೂ ಜಗಜ್ಜಾಹೀರು ಮಾಡಿ ಗಂಡನ್ನು ಕೇಳುವರೇ? ಅವಳಂತೂ ಸುತಾರಾಮ್ ಒಪ್ಪಲಿಲ್ಲ. ನಯಾಜ್ ಕೂಡಾ ತನ್ನ ಪ್ರಯತ್ನ ಬಿಡಲಿಲ್ಲ. ಈಗಿನ ಕಾಲದಲ್ಲಿ ಮದುವೆಗಳು ಆಗುವುದೇ ಹೀಗೆ ಎಂದು ತಾಯಿಯನ್ನು ನಂಬಿಸಿದ. ಹೀಗೆ ಮಾಡಿದಾಗ ಮಾತ್ರ ಗಂಡಿನ ಮನೆಯವರು ಹೆಣ್ಣನ್ನು ಹುಡುಕಿಕೊಂಡು ತಮ್ಮ ಮನೆಗೆ ಬರಲು ಸಾಧ್ಯ. ಇಲ್ಲವಾದಲ್ಲಿ ಅಜ್ರಾ ಹೀಗೆಯೇ ಮನೆಯಲ್ಲಿ ಕುಳಿತೇ ಮುದುಕಿಯಾಗುವಳು ಎಂದು ಹೆದರಿಸಿದ.

ಮಗ ತನ್ನ ಕಣ್ಣೀರಿಗೆ ಕರಗುವನೆಂದು ತಿಳಿದಿದ್ದರಿಂದ, ಕಣ್ಣಾಲಿಗಳನ್ನು ತುಂಬಿಕೊಂಡು, 'ನಿನ್ನ ಸ್ನೇಹಿತರ ಪೈಕಿ ಯಾರಾದರೂ ಇದ್ದರೆ ನೋಡಪ್ಪಾ' ಎಂದು ಬೇಡಿಕೊಂಡಳು. ಅವಳ ಯಾಚನೆಯ ಧ್ವನಿಯಿಂದಲೇ ರೇಗಿಕೊಳುತ್ತಿದ್ದ ಅವನು 'ಹಂಗೆ ಬೇಡಿಕೊಳ್ಳ ಬೇಡಮ್ಮಾ... ನಂಗೂ ಅವಳ ಮದುವೆ ಮಾಡಬೇಕೆಂಬ ಆಸೆ ವಿಪರೀತ ಇದೆ. ಆದರೆ, ನೋಡು ನನ್ನ ಫ್ರೆಂಡ್ಸ್ ನನ್ನ ಹಾಗೆಯೇ. ಇಲ್ಲ ಸ್ಟೂಡೆಂಟ್ಸ್. ಇಲ್ಲ ನಿರುದ್ಯೋಗಿಗಳು. ಮತ್ತೆ ನನ್ನ ತಂಗಿಗೊಂದು ಗಂಡುಕೊಡಿ ಅಂತ ಬೇಡಿಕೊಂಡು ತಿರುಗುವುದು ನನ್ನ ಕೈಯಲ್ಲಾಗದ ಕೆಲಸ' ಎಂದು ಸ್ಪಷ್ಟ ಪಡಿಸಿದ್ದೂ ಅಲ್ಲದೆ, ಇಂಟರ್‌ನೆಟ್ ಮೂಲಕ ಗಂಡು ಹುಡುಕುವುದೇ ಇದ್ದುದರಲ್ಲಿ ಗೌರವಾರ್ಹ ಮತ್ತು ಸಭ್ಯ ಮಾರ್ಗ ಎಂದು ಅವಳಿಗೆ ತಿಳಿ ಹೇಳುವುದರಲ್ಲಿಯೇ ಸುಮಾರು